ಪ್ರಜಾವಾಣಿ
ಶನಿವಾರ • ಮೇ 9, 2015

## ಹಸಿರು ನ್ಯಾಯಮಂಡಳಿಯ ತೀರ್ಪಿಗೆ ಸ್ವಾಗತ

# ನಿರ್ಮಾಣ ಚಟುವಟಿಕೆ ಸ್ಥಗಿತಕ್ಕೆ ತಜ್ಞರ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಬೆಳ್ಳಂದೂರು ಹಾಗೂ ಅಗರ ಕೆರೆಗಳ ದಂಡೆಯಲ್ಲಿ ನಿರ್ಮಾಣ ಚಟುವಟಿಕೆಗಳನ್ನು ಸ್ಥಗಿತಗೊಳಿಸಬೇಕು. ಆಗ ಮಾತ್ರ ಆಸುಪಾಸಿನ ಕೆರೆಗಳು ಉಳಿಯಲು ಸಾಧ್ಯ. ಈ ವಿಷಯದಲ್ಲಿ ಯಾವುದೇ ಹೊಂದಾಣಿಕೆ ಮಾಡಿಕೊಳ್ಳಬಾರದು' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಹಿರಿಯ ವಿಜ್ಞಾನಿ ಪ್ರೊ.ಟಿ.ವಿ. ರಾಮಚಂದ್ರ ಒತ್ತಾಯಿಸಿದ್ದಾರೆ.

ಕಟ್ಟಡ ನಿರ್ಮಾಣದಲ್ಲಿ ಪರಿಸರ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಬೆಂಗಳೂರು ಮೂಲದ ಮಂತ್ರಿ ಟೆಕ್‌ಝೋನ್ ಪ್ರೈ ಲಿಮಿಟೆಡ್ ಮತ್ತು ಕೋರ್‌ಮೈಂಡ್ ಸಾಫ್ಟ್‌ವೇರ್ ಆ್ಯಂಡ್ ಸರ್ವಿಸಸ್ ಪ್ರೈ ಲಿಮಿಟೆಡ್ ಕಂಪೆನಿಗಳಿಗೆ ಗುರುವಾರ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ₹ 139.85 ಕೋಟಿ ದಂಡ ವಿಧಿಸಿತ್ತು. ಈ ಕ್ರಮವನ್ನು ತಜ್ಞರು ಹಾಗೂ ಕ್ಷೇಮಾಭಿವೃದ್ಧಿ ಸಂಘಗಳ ಪದಾಧಿಕಾರಿಗಳು ಸ್ವಾಗತಿಸಿದ್ದಾರೆ.

'ಇದೊಂದು ಐತಿಹಾಸಿಕ ತೀರ್ಪು. ಬೇಸರದ ಸಂಗತಿಯೆಂದರೆ ನ್ಯಾಯ ಮಂಡಳಿ ಕಾಮಗಾರಿ ಸ್ಥಗಿತ ಮಾಡಲು ಸೂಚನೆ ನೀಡಿಲ್ಲ. ಹೀಗಾಗಿ ನಾವು ಸಾಗಬೇಕಾದ ದಾರಿ ಸಾಕಷ್ಟು ದೂರ ಇದೆ' ಎಂದು ಪದಾಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. 'ಈ ತೀರ್ಪು ನ್ಯಾಯಾಂಗ ವ್ಯವಸ್ಥೆಯ ಮೇಲೆ ವಿಶ್ವಾಸ ಹೆಚ್ಚಿಸಿದೆ' ಎಂದು ಹೋರಾಟಗಾರರು ತಿಳಿಸಿದ್ದಾರೆ.

'ನ್ಯಾಯಮಂಡಳಿ ತೀರ್ಪು ಸ್ವಾಗತಾರ್ಹ. ಪರಿಸರಕ್ಕೆ ಹಾನಿ ಮಾಡುವ ಇಂತಹ ಕೈಗಾರಿಕೆಗಳ ಸ್ಥಾಪನೆಗೆ ಅನುವು ಮಾಡಿಕೊಡಬಾರದು. ಸರ್ಕಾರ ಈ ವಿಷಯದಲ್ಲಿ ಎಚ್ಚರಿಕೆ ವಹಿಸಬೇಕು' ಎಂದು ಸಿಟಿಜನ್ ಆಕ್ಷನ್ ಫೋರಂನ ವಿಜಯನ್ ಮೆನನ್ ತಿಳಿಸಿದರು.

'ಕೈಗಾರಿಕೆಗಳಿಂದ ಪರಿಸರ ಹಾಳಾಗಿರುವ ವಿಷಯವನ್ನು ಕೇಂದ್ರ ಪರಿಸರ ಸಚಿವರ ಗಮನಕ್ಕೆ ತಂದಿದ್ದೇನೆ. ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಅವರು ಭರವಸೆ ನೀಡಿದ್ದಾರೆ' ಎಂದು ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್ ತಿಳಿಸಿದರು.

**ಗ್ರಾಮಸ್ಥರ ಆರೋಪ:** 'ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ತ್ಯಾಜ್ಯ ಬಂದು ಸೇರುತ್ತಿರುವ ಕಾರಣ ಕೆರೆ ಸಂಪೂರ್ಣ ಕಲುಷಿತಗೊಂಡಿದೆ. ಕೆರೆಯಿಂದ ಬರುತ್ತಿರುವ ದುರ್ನಾತದಿಂದ ಸುತ್ತ ಮುತ್ತಲಿನ ಊರುಗಳ ಜನತೆ ಮೂಗು ಮುಚ್ಚಿಕೊಂಡು ದಿನ ಕಳೆಯುವಂತಾಗಿದೆ' ಎಂದು ಸ್ಥಳೀಯರು ದೂರಿದ್ದಾರೆ.

'ಈ ಮೊದಲು ಕೆರೆಯ ನೀರನ್ನು ಕೃಷಿ ಚಟುವಟಿಕೆಗೆ ಬಳಸಲಾಗುತ್ತಿತ್ತು. ಸದ್ಯ ಕೆರೆ ರಾಸಾಯನಿಕದ ಗುಂಡಿಯಂತಾಗಿದ್ದು, ನೀರು ವಿಷಯುಕ್ತವಾಗಿದೆ' ಎಂದು ರೈತ ವೆಂಕಟೇಶಪ್ಪ ಹೇಳಿದರು.

'ತೀರ್ಪಿನ ಪ್ರತಿ ಸಿಕ್ಕಿಲ್ಲ. ಹಾಗಾಗಿ ಈ ವಿಷಯದ ಬಗ್ಗೆ ಸದ್ಯ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಮಂತ್ರಿ ಡೆವಲಪರ್ಸ್‌ನ ರೇಣುಕಾ ತಿಳಿಸಿದರು.

